**CC 1288/2020**
**CW1 - PW1**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

**CC 1288/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಜಯಣ್ಣ ಹೆಚ್ ಈ | **C.W –1** |
| ತಂದೆಯ ಹೆಸರು | ಃ | ಈರಯ್ಯ | **P.W – 1** |
| ವಯಸ್ಸು | ಃ | 50 ವರ್ಷ | |
| ಉದ್ಯೋಗ | ಃ | ಅಂಚೆ ಇಲಾಖೆ ನೌಕರ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಹಿರಿಸಾವೆ | ದಿನಾಂಕಃ **09.06.2023** |

---

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಚಾ ಸಾ 2 ರಿಂದ 5 ರವರು ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು.

ದಿನಾಂಕ 27.06.2020 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ನನ್ನ ಅಕ್ಕ ಚಾ ಸಾ 3 ರವರನ್ನು ಕರೆದುಕೊಂಡು ಹೋಗಿದ್ದು, ಆ ಸಮಯದಲ್ಲಿ ಮೂಳೆ ಮತ್ತು ಕೀಲು ತಜ್ಞರಾದ ಡಾ. ಮಹೇಶ್ ರವರು ಕರ್ತವ್ಯದಲ್ಲಿ ಇಲ್ಲದೇ ಇದ್ದುದರಿಂದ ಈ ಬಗ್ಗೆ ನಾನು ಅಲ್ಲೇ ಇದ್ದ ಸಿಬ್ಬಂದಿಯನ್ನು ಪ್ರಶ್ನಿಸಿದಾಗ ಡಾ. ಮಹೇಶ್ ಅವರು ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ನಾವು ಸುಮಾರು ಮಧ್ಯಾಹ್ನ 02.30 ಗಂಟೆಯವರೆಗೆ ಕಾದು ಈ ಬಗ್ಗೆ ನಾನು ತಾಲ್ಲೂಕು ಆರೋಗ್ಯ ಅಧಿಕಾರಿಯವರಿಗೆ ದೂರನ್ನು ನೀಡಿರುತ್ತೇವೆ. ನಂತರ ಚಾ ಸಾ 3 ರವರಿಗೆ ಊಟನ್ನು ಕೊಡಿಸಿ ನಾನು ಮತ್ತು ಚಾ ಸಾ 2 ಹಿರಿಸಾವೆಗೆ ಬೈಕ್ ನಲ್ಲಿ ಹೋಗಿರುತ್ತೇವೆ. ನಂತರ ಅದೇ ದಿನ ಸಂಜೆ 04.54 ನಿಮಿಷಕ್ಕೆ ನನಗೆ 9945914845 ಸಂಖ್ಯೆಯಿಂದ ನನ್ನ ಮೊಬೈಲ್ ಸಂಖ್ೆಯಾದ 9611554922 ಗೆ ಕರೆ ಬಂದಿರುತ್ತದೆ. ಆ ಸಮಯದಲ್ಲಿ ಮಹೇಶ್ ಡಾಕ್ಟರ್ ಮೇಲೆ ದೂರು ನೀಡಲು ನೀನು ಯಾರು, ನೀನು ಎಲ್ಲಾ ಅಧಿಕಾರಿಗಳ ಮೇಲೆ ಅರ್ಜಿ

ಕೊಟ್ಟು ಜೀವನ ಮಾಡುತ್ತಿದ್ದೀಯಾ, ಸುಳೇ ಮಗನೇ, ಬೋಳಿಮಗನೇ, ನಿಮ್ಮ ಅಮ್ಮನ ಜಾತಿನಕ್ಯಾಯಿ, ನಿನ್ನ ನರ ಕಟ್ ಮಾಡ್ತೀನಿ, ನಿನಗೆ ತಾಕತ್ತು ಇದ್ದರೆ ಚನ್ನರಾಯಪಟ್ಟಣಕ್ಕೆ ಬಾರ್ಲಾ ನಿನ್ನನ್ನು ಅಲ್ಲೇ ಸುಟ್ಟಾಕುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ ಹಲ್ಕಾ ನನ್ನ ಮಗನೇ ಎಂದು ಬೈದಿರುತ್ತಾನೆ. ಡಾ. ಮಹೇಶ್ ಅವರ ಕುಮ್ಮಕ್ಕಿನಿಂದ ನನಗೆ ಬೆದರಿಕೆ ಬಂದಿರುತ್ತದೆ. ಈ ಬಗ್ಗೆ ನಾನು ಮಾರನೇ ದಿನ ಬೆಳಿಗ್ಗೆ ದಿನಾಂಕ 28.06.2020 ರಂದು ದೂರು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಕೃತ್ಯ ಸ್ಥಳದ ಮಹಜರ್ ನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 28.06.2020 ರಂದು ಚನ್ನರಾಯಪಟ್ಟಣ ತಾಲ್ಲೂಕು ಬೆಳಗೊಳ ಹೋಬಳಿ ಮಟ್ಟವಿಲೆ ಗ್ರಾಮದ ಎನ್ ಹೆಚ್ 75 ಸರ್ವೀಸ್ ರಸ್ತೆಯ ಎಡಭಾಗದಲ್ಲಿ ಪೋಲೀಸರು ನನ್ನ ಮತ್ತು ಚಾ ಸಾ 4 ಮತ್ತು 5 ರವರ ಸಮಕ್ಷಮ ಸಂಜೆ ಸುಮಾರು 04.00–04.45 ರ ಸಮಯದಲ್ಲಿ ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿರುತ್ತಾರೆ . ನಿ ಪಿ 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ಈ ಬಗ್ಗೆ ನಾನು ಪೋಲೀಸರಿಗೆ ಮರು ಹೇಳಿಕೆ ನೀಡಿ ಚಾ ಸಾ 2 ರವರನ್ನು ಸಾಕ್ಷಿಯಾಗಿ ಸೇರಿಸುವಂತೆ ಮರು ಹೇಳಿಕೆ ನೀಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಏನನ್ನೂ ನಾನು ಹೇಳಿರುವುದಿಲ್ಲ. ಅಮಾನತ್ತು ನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸ್ಥಳದಲ್ಲಿ ಪೋಲೀಸರು ಮಹಜರ್ ಕ್ರಮ ಜರುಗಿಸುವ ಸಮಯದಲ್ಲಿ ನಿ ಪಿ 3 ಕ್ಕೆ ನಾನು ಸಹಿ ಮಾಡಿರುತ್ತೇನೆ. ನಂತರ ಪೋಲೀಸರು ಪೋಲೀಸ್ ಠಾಣೆಗೆ ಕರೆಯಿಸಿ ನನ್ನ ಮೊಬೈಲ್ ಫೋನ್ ಮತ್ತು ಸಿ ಡಿ ಡಿಸ್ಕ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಂಜೆ ಸುಮಾರು 05.00–05.30 ಗಂಟೆ ಸಮಯದಲ್ಲಿ ನಿ ಪಿ 3 ನ್ನು ಬರೆದಿರುತ್ತಾರೆ.

ಅಮಾನತ್ತುಪಡಿಸಿಕೊಂಡಿರುವ ನನ್ನ ಮೊಬೈಲ್ ಫೋನ್ ಮತ್ತು ಸಿ ಡಿ ಡಿಸ್ಕ್ ನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮೊಬೈಲ್ ಫೋನ್ ಮತ್ತು ಸಿ ಡಿ ಡಿಸ್ಕ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಂ ಒ 1 ಮತ್ತು 2 ಎಂದು ಗುರುತಿಸಲಾಯಿತು.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಡಾ.ಮಹೇಶ್ ಅವರ ಕುಮ್ಮಕ್ಕಿನಿಂದ ನನಗೆ ವಿನಯ್ ಕುಮಾರ್ ಫೋನ್ ಮೂಲಕ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಯೇ ಅಥವಾ ಇಲ್ಲವೇ ಎಂದು ನನಗೆ ತಿಳಿದಿರುವುದಿಲ್ಲ ಎಂದು ನಾನು ದಿನಾಂಕ *03.07.2020*ರಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ ಪಿ *4* ಎಂದು ಗುರುತಿಸಲಾಯಿತು. ದಿನಾಂಕ *28.06.2020*ರಂದು ಪೋಲೀಸರು ಹಿರಿಸಾವೆ ಪೋಲೀಸ್ ಠಾಣೆಯ ಹಾಲ್ ನಲ್ಲಿ ಎಂ ಒ *1* ಮತ್ತು *2*ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅಮಾನತ್ತು ಮಹಜರ್ ಕ್ರಮವನ್ನು ಸಂಜೆ *05.15* ರಿಂದ *06.00* ಗಂಟೆ ಸಮಯದಲ್ಲಿ ಜರುಗಿಸಲಾಯಿತು ಎಂದರೆ ಸರಿ. ಆ ಸಮಯದಲ್ಲಿ ನನ್ನ ಜೊತೆ ಚಾ ಸಾ *4* ಮತ್ತು *5*ರವರು ಹಾಜರಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ವಿಚಾರ ತಿಳಿದುಕೊಂಡು ಸಹಿ ಹಾಕಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು** – ಶ್ರೀ ಡಿ ಕೆ ಎಂ ಆರೋಪಿ ಪರ ವಕೀಲರಿಂದ

ಚಾ ಸಾ *3*ರವರು ನುಗ್ಗೆಹಳ್ಳಿ ಹೋಬಳಿಯ ಹುಲ್ಲೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು ಹಿರಿಸಾವೆಗೆ ಬಂದಿದ್ದರು. ಹುಲ್ಲೇನಹಳ್ಳಿಗೂ ಮತ್ತು ಹಿರಿಸಾವೆಗೂ *16* ಕಿ.ಮಿ. ಅಂತರವಿದೆ. ಹಿರಿಸಾವೆ ಮತ್ತು ನುಗ್ಗೆಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆಯಿದೆ ಎಂದರೆ

ಸಾಕ್ಷಿಯು ಅಲ್ಲಿ ಮೂಳೆ ಮತ್ತು ಕೀಲು ತಜ್ಞರು ಇಲ್ಲವೆಂದು ನುಡಿಯುತ್ತಾರೆ. ಹಿರಿಸಾವೆ ಮತ್ತು ನುಗ್ಗೆಹಳ್ಳಿಯಲ್ಲಿ ಚಾ ಸಾ 3ರವರನ್ನು ತೋರಿಸದೇ ನೇರವಾಗಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ ಎಂದರೆ ಸರಿ. ಚಾ ಸಾ 3ರವರು ನೇರವಾಗಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು ನಾನು ಮತ್ತು ಚಾ ಸಾ 2ರವರು ಹಿರಿಸಾವೆಯಿಂದ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಬೈಕ್ ನಲ್ಲಿ ಬಂದಿರುತ್ತೇವೆ. ಬೈಕ್ ನ್ನು ನಾನೇ ಚಲಾಯಿಸುತ್ತಿದ್ದೆ. ಹಿರಿಸಾವೆಯಿಂದ ಚನ್ನರಾಯಪಟ್ಟಣಕ್ಕೆ 30 ಕಿ.ಮಿ. ಅಂತರವಿದೆ ಎಂದರೆ ಸಾಕ್ಷಿಯು 21–22 ಕಿ.ಮಿ. ಅಂತರವಿದೆ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ನಾನು 10.00 ಗಂಟೆ ಸಮಯಕ್ಕೆ ಬಂದಿರುತ್ತೇನೆ. ಘಟನೆ ನಡೆದ ದಿನದಂದು ನಾವು ಚಾ ಸಾ 3ರವರ ಎಕ್ಸ್ ರೇ ಮಾಡಿಸಿದ್ದೆವು. ಬಲಗೈನ ಮಣಿಕಟ್ಟಿನ ಎಕ್ಸ್ ರೇ ತೆಗೆಸಿದ್ದೆವು. ನಾವೇ ಸ್ವತಃ ಹೋಗಿ ಎಕ್ಸ್ ರೇ ತೆಗೆಸಿದ್ದೆವು. ನಾವು ಒ ಪಿ ಡಿ ಕಾರ್ಡ್ ನ್ನು ಚಾ ಸಾ 3ರವರ ಹೆಸರಿನಲ್ಲಿ ತೆಗೆದುಕೊಂಡಿದ್ದೆವು. ಸದರಿ ದಿನದಂದು ಕರ್ತವ್ಯದಲ್ಲಿ ಯಾರು ಇದ್ದರು ಎಂದು ನಾನು ತಿಳಿದುಕೊಂಡಿಲ್ಲ. ಆಸ್ಪತ್ರೆಯ ನೋಟೀಸ್ ಬೋರ್ಡ್ ನಲ್ಲಿ ಆ ದಿನದ ಕರ್ತವ್ಯ ನಿರ್ವಹಿಸುವ ವೈದ್ಯರು ಯಾರು ಎಂದು ನಮೂದಿಸಿರುತ್ತಾರೆ ಎಂದರೆ ನಾನು ನೋಡಿಲ್ಲ. ಸದರಿ ದಿನದಂದು ಮೂಳೆ ಮತ್ತು ಕೀಲು ತಜ್ಞರು ಕರ್ತವ್ಯದಲ್ಲಿ ಇರುತ್ತಾರೆ ಎಂದು ನೋಟೀಸ್ ಬೋರ್ಡ್ ನಲ್ಲಿ ನಮೂದಿಸಿದ್ದಾರೆಯೇ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ಡಾ. ಮಹೇಶ್ ಅವರಿಗಾಗಿ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ಕೊಠಡಿಯ ಮುಂಭಾಗದಲ್ಲಿ ಕಾಯುತ್ತಿದ್ದೆವು. ಡಾ. ಮಹೇಶ್ ಅವರು ಆಸ್ಪತ್ರೆಯ ಯಾವ ಕೊಠಡಿಯಲ್ಲಿ ಚಿಕಿತ್ಸೆ ನೀಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಡಾ. ಮಹೇಶ್ ರವರಿಗೆ ನಾನು ದೂರವಾಣಿ ಕರೆ ಮಾಡಿಲ್ಲ. ಆಸ್ಪತ್ರೆಯಲ್ಲಿ ವೈದ್ಯರ ದೂರವಾಣಿ ನಂಬರ್ ನ್ನು ಸಹ ನಮೂದಿಸಿರುತ್ತಾರೆ ಎಂದರೆ ನಾನು ನೋಡಿಲ್ಲ. ಆಸ್ಪತ್ರೆಯ ತಾಲ್ಲೂಕು ಆರೋಗ್ಯ ಅಧಿಕಾರಿ ಕಿಶೋರ್ ಕುಮಾರ್ ಅವರಿಗೆ ದೂರನ್ನು ನೀಡಿದ್ದೆನು. ಆರೋಪಿ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿಯು ಏನು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಡಾ. ಮಹೇಶ್ ಅವರ ಪುಣ್ಯ ಕ್ಲಿನಿಕ್ ನಲ್ಲಿ ಆರೋಪಿ ಇರುತ್ತಾನೆ ಎನ್ನುತ್ತಾರೆ. ಘಟನೆ ನಡೆದ ದಿನದಂದು ಚಾ

**CC 1288/2020**
**CW1 - PW1**

ಸಾ *3* ರವರನ್ನು ಬೇರೆ ಯಾವುದೇ ಆಸ್ಪತ್ರೆಗೆ ತೋರಿಸಿಲ್ಲ. ಚನ್ನರಾಯಪಟ್ಟಣದಲ್ಲಿ ಸುಮಾರು *5-6* ಮೂಳೆ ಮತ್ತು ಕೀಲು ತಜ್ಞರು ಇದ್ದಾರೆ ಎಂದರೆ ಸರಿ. ಘಟನೆ ನಡೆದ *1* ವಾರದ ನಂತರ ಚಾ ಸಾ *3* ರವರನ್ನು ಬೇರೆ ವೈದ್ಯರ ಬಳಿ ತೋರಿಸಿರುತ್ತೇನೆ.

ಘಟನೆ ನಡೆದ ದಿನದಂದು ನಾನು ಹೆಲ್ಮೆಟ್ ನ್ನು ಧರಿಸಿರುತ್ತೇನೆ. ಚನ್ನರಾಯಪಟ್ಟಣದಿಂದ ವಾಪಸ್ಸು ಹೋಗುವಾಗ ಹೆಲ್ಮೆಟ್ ಧರಿಸಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನರಾಯಪಟ್ಟಣ